Date : 23-9-2015

# ರಾಜಕೀಯ ಅಸ್ಥಿರತೆಯಿಂದ ಗಿನಿಯಾ–ಬಿಸಾವುನ ಕಚ್ಚಾ ಗೇರು ಬೀಜ ಕಟಾವಿನ ಮೇಲೆ ಪರಿಣಾಮ

ದಾಖಲೆ ಪ್ರಮಾಣದ ಕಚ್ಚಾ ಗೇರು ಬೀಜ ಗಿನಿಯಾ – ಬಿಸಾವುನಲ್ಲಿ ಉತ್ಪಾದಿಸಲಾಗಿದೆ. ಆದರೆ ಪ್ರಸ್ತುತ ರಾಜಕೀಯ ಅಸ್ಥಿರತೆಯಿಂದ ಕಟಾವಿನ ಮೇಲೆ ಪರಿಣಾಮ ಬೀರಿದೆ. ಕಳೆದ 36 ದಿವಸಗಳಿಂದ ಅಲ್ಲಿ ಸರಕಾರ ಅಸ್ಥಿತ್ವದಲ್ಲಿಲ್ಲದಿರುವುದರಿಂದ ಆರ್ಥಿಕ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ಆದರೆ ಮುಂಬರುವ ವಾರಗಳಲ್ಲಿ ಈ ಸಮಸ್ಯೆ ಪರಿಹಾರವಾಗಲಿದೆಯೆಂದು ಅಲ್ಲಿನ ಹಿಂದಿನ ಅರ್ಥಿಕ ಮಂತ್ರಿಯಾದ ಜೆರಾಲ್ಡೊ ಮಾರ್ಟಿನ್ ರೈಟರ್‌ಗೆ ಹೇಳಿದ್ದಾರೆ.

ಈ ಸೀಜನ್‌ನಲ್ಲಿ ಇದು ವರೆಗೆ ಅಲ್ಲಿಂದ 170000 ಟನ್ ಕಚ್ಚಾ ಗೇರು ಬೀಜ ರಫ್ತು ಮಾಡಲಾಗಿದೆಯೆನ್ನಲಾಗಿದ್ದು ಈ ಸೀಜನ್‌ನ ಒಟ್ಟು ಉತ್ಪಾದನೆ 2 ಲಕ್ಷ ಟನ್‌ಗೂ ಅಧಿಕವೆಂದು ಹೇಳಲಾಗಿದ್ದು 2011ನೇ ಸಾಲಿನ ಅತೀ ಹೆಚ್ಚಿನ ದಾಖಲೆಯನ್ನು ಮೀರಿದೆ.